ಭಾವ ಹಾಗೆ ಹೇಳುವಾಗ ಅಲಿಮಾಳಿಗೆ ಹೆದರಿಕೆಯಾಗುತ್ತಿತ್ತು. "ಮದುವೆ ಆದರೆ ಏನಾಗುತ್ತದೆ?" ಎಂದು ಅಕ್ಕನನ್ನು ಅವಳು ಒಮ್ಮೆ ಕೇಳಿದ್ದಳು.

"ಮಕ್ಕಳಾಗುತ್ತದೆ."

"ಹಾಗಾದರೆ ನಿನಗೆ ಯಾಕೆ ಮಕ್ಕಳಾಗಲಿಲ್ಲ?"

"ಈಗ ಮಗುವಾಗಿ ನೀನಿದ್ದೀಯಲ್ಲಾ? ಅದಕ್ಕೇ ಮಕ್ಕಳನ್ನು ಕೊಡಲು ಅಲ್ಲಾ ತಡಮಾಡುತ್ತಿದ್ದಾನೆ."

"ಅಂದರೆ, ನಿನಗೆ ಮಗುವಾಗುವಾಗ ನೀನು ಮುದುಕಿಯಾಗಿ ಬಿಡ್ತೀಯಾ?" ಎಂದು ಅಲಿಮಾ ಗಾಬರಿಯಿಂದ ಕೇಳಿದ್ದಳು.

"ಇಲ್ಲ ಬಂಗಾರ. ಮುದುಕಿಯರಿಗೆ ಮಕ್ಕಳಾಗುವುದಿಲ್ಲ. ನಾನು ಮುದುಕಿಯಾದರೆ ನಿನಗೆ ಬೇಸರವಾಗುತ್ತದಾ?"

"ನೀನು ಮುದುಕಿಯಾದರೆ ಭಾವ ನನ್ನನ್ನು ಮದುವೆಯಾಗುತ್ತಾರಂತೆ. ಆಮೇಲೆ ನಾನು ಹೆರ್ಬೇಕಾ?"

ಅಕ್ಕ ಕಿಲಕಿಲ ನಕ್ಕು, "ಎಂಡೆ ರಬ್ಬೇ, ಕೂಡದಪ್ಪಾ. ನಿನ್ನ ಭಾವನ ಕುಸಾಲಿಗೆ ತಲೆಬುಡ ಇಲ್ಲ. ನಾನು ಮುದುಕಿಯಾದಾಗ ಭಾವ ಮುದಿ ತೊಂಡ ಆಗಿರುತ್ತಾರೆ. ಮುದಿತೊಂಡರಿಗೆ ಯಾರೂ ಮದುವೆ

